# ಬುದ್ಧ ಭಾರತ ಹೊಸ ಸಾಧ್ಯತೆಗಳು

ಡಾ. ಜಿ. ರವಿ, ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ ಬೆಂಗಳೂರು.

**ಜಾತೀಯತೆ ಮೀರಿದ ಬೌದ್ಧಿಕತೆ, ಮತೀಯತೆ ಮೀರಿದ ಮಾನಸಿಕತೆ ಹಾಗೂ ಮಾನವೀಯತೆ–ಅಂತಃಕರಣವೇ ಮುಖ್ಯವಾಗಿರುವ ಬುದ್ಧ ಭಾರತವೇ ಪ್ರಬುದ್ಧ ಭಾರತ'**

**– ಬರಗೂರು ರಾಮಚಂದ್ರಪ್ಪ**

ಬುದ್ಧನ (ಕ್ರಿ.ಪೂ. 563–483) ಕುರಿತು ಅನೇಕ ಕತೆಗಳಿವೆ. ಅದರಲ್ಲಿ ಪ್ರಸಿದ್ಧವಾಗಿರುವ ಕತೆಯೆಂದರೆ ಅವನು ನಾಲ್ಕು ದೃಶ್ಯಗಳನ್ನು ಕಂಡು ಸಿಂಹಾಸನವನ್ನು ತ್ಯಜಿಸಿ, ಮಡದಿ ಯಶೋಧರ ಹಾಗೂ ಮಗ ರಾಹುಲನನ್ನು ತೊರೆದು ಆಳು ಚನ್ನನ ಸಹಾಯದಿಂದ ರಾತ್ರೋರಾತ್ರಿ ಹೊರಟುಹೋದದ್ದು. ಇನ್ನೊಂದು ಕತೆಯ ಪ್ರಕಾರ ಬುಡಕಟ್ಟು ದಂಗೆಯ ಕಾರಣದಿಂದ ಅವನು ಮರಣದಂಡನೆಯಿಂದ ತಪ್ಪಿಸಿಕೊಳ್ಳಲು ರಾಜ ಪದವಿಯನ್ನು ಬಿಟ್ಟು ಸಂನ್ಯಾಸ ದೀಕ್ಷೆಯನ್ನು ಪಡೆದ. ಮತ್ತೊಂದು ಕತೆಯ ಪ್ರಕಾರ ಅವನ ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿತ್ತು. ಪ್ರಜಾಪಾಲನೆಯ ರಾಜಧರ್ಮವನ್ನು ಪಾಲಿಸಲಾಗದವನು ರಾಜ್ಯಾಧಿಕಾರದಲ್ಲಿ ಮುಂದುವರೆಯುವುದು ಸರಿಯಲ್ಲ ಎಂಬ ಕಾರಣಕ್ಕೆ ಅವನು ಸಿಂಹಾಸನವನ್ನು ಬಿಟ್ಟುಕೊಟ್ಟ. ಮಗದೊಂದು ಕತೆಯ ಪ್ರಕಾರ ಶಾಕ್ಯ ಮತ್ತು ಕೋಲಿ ರಾಜ್ಯಗಳ ನಡುವೆ ಉದ್ಭವಿಸಿದ ರೋಹಿಣಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಎದುರಾದ ಬಿಕ್ಕಟ್ಟು ಬುದ್ಧ ಅರಮನೆ ತೊರೆಯಲು ಕಾರಣವಾಗಿತ್ತು. ಈ ನಾಲ್ಕೂ ಕತೆಗಳಲ್ಲಿ ಅವನು ಅಧಿಕಾರವನ್ನು ತೊರೆದುದರ ಬಗೆಗೆ ಖಚಿತವಾಗುತ್ತದೆ. ಹಾಗೆಯೇ ಏಕೆ ಎಂಬ ಅನುಮಾನಗಳು ಬಗೆಹರಿಯುವುದಿಲ್ಲ.

ಮೊದಲ ಕತೆಯ ಕುರಿತು ಪ್ರಾಯೋಗಿಕವಾಗಿ ಅನ್ವಯಿಸಬಹುದೇ? ಎಂಬ ಪ್ರಶ್ನೆ ಮೂಡುತ್ತದೆ. ಜಗತ್ತಿನ ದುಃಖವನ್ನು ಕಳೆಯ ಹೊರಟವನು ಹೆಂಡತಿ, ಮಗನನ್ನು ಬಿಟ್ಟು ಹೋದಾಗ ಅವರಿಗಾದ ದುಃಖವನ್ನು ಹೇಗೆ ಪರಿಹರಿಸಿದ? ಎಂಬ ಪ್ರಶ್ನೆ ಎದುರಾಗುತ್ತದೆ. ಉಳಿದ ಮೂರು ಕತೆಗಳಲ್ಲಿ ಕೆಲವಾದರೂ ಅನ್ವಯಿಸಬಹುದಾದ ಅಂಶಗಳು ಸಿಗುತ್ತವೆ. ನದಿ ನೀರಿನ ಹಂಚಿಕೆಯಲ್ಲಿ ಉಂಟಾದ ಭಿನ್ನಾಭಿಪ್ರಾಯಗಳನ್ನು ಅಹಿಂಸೆಯ ಮೂಲಕ ಬಗೆಹರಿಸಿಕೊಳ್ಳಬೇಕೆಂಬ ಅವನ ವಾದಕ್ಕೆ ಸಮ್ಮತಿ ದೊರೆಯದಿರುವುದರಿಂದ ಅವನು ಸಿಂಹಾಸನವನ್ನು ತಿರಸ್ಕರಿಸಿರಬಹುದು ಅಥವಾ ಅವನನ್ನು ಸ್ಥಾನಭ್ರಷ್ಟಗೊಳಿಸಿರಬಹುದು. ಅವನ ಮುಂದಿನ ಅನ್ವೇಷಣೆಯ ದಾರಿಯಿಂದ ನಮಗೆ ಹೊಸ ಹೊಳವುಗಳು ಅವನ ಹಿಂದಿನ ಜೀವನದ ಬಗೆಗೆ ಸಿಕ್ಕುತ್ತವೆ. ಅವುಗಳ ಮೂಲಕ ಬುದ್ಧನ ಅಂದಿನ ಆಂತರಿಕ ಮತ್ತು ಬಾಹ್ಯ ಒತ್ತಡಗಳ ಸ್ಪಷ್ಟತೆ ನಮಗೆ ಸಿಗದಿದ್ದರೂ ಒಂದು ಊಹೆಯನ್ನಾದರೂ ಮಾಡಬಹುದು. ಆ ಮೂಲಕ ಅವನ ಮುಂದಿನ ನಡೆಯ ಮೇಲೆ ಈ ಕಾರಣಗಳು ಪರಿಣಾಮ ಬೀರಿರುವ ಸಾಧ್ಯತೆಗಳನ್ನು ಮನಗಾಣಬೇಕಿದೆ.

ಆದ್ದರಿಂದಲೇ ಅವನು ತನ್ನ ಬಗೆಗಾಗಲಿ, ದೇವರ ಬಗೆಗಾಗಲಿ ಮಾತನಾಡುವುದಿಲ್ಲ. ಅದರ ಬದಲಾಗಿ ಜಗತ್ತಿನ ಆತ್ಯಂತಿಕ ಸಮಸ್ಯೆಯಾಗಿ ಇಂದಿಗೂ ಅಸ್ತಿತ್ವದಲ್ಲಿರುವ ಆಸೆಯ ಕುರಿತು ಮಾತನಾಡುತ್ತಾನೆ. 'ಆಸೆಯೇ ದುಃಖಕ್ಕೆ ಮೂಲ'ಎಂಬ ಸರಳ ಸತ್ಯವನ್ನು ಕಾಣುವುದು ಕಷ್ಟಕರ. ಇನ್ನು ಅದನ್ನು ಅನ್ವಯಿಸಿಕೊಳ್ಳುವುದು, ಒಪ್ಪಿಕೊಳ್ಳುವುದು, ಆಚರಣೆಗೆ ತರುವುದು ಇಂದಿಗೂ ಆದರ್ಶವಾಗಿಯೇ ಉಳಿದಿದೆ. ಬುದ್ಧನ ತತ್ವಗಳು ಆದರ್ಶಲೋಕವೊಂದರ ಹುಡುಕಾಟವೇ ಆಗಿವೆ.

**ಬುದ್ಧನ ತತ್ವಗಳು:**

**1. ನಾಲ್ಕು ಮೂಲ ತತ್ವಗಳು:** ಅ. ಅಹಿಂಸೆ ಆ. ಸತ್ಯ ನುಡಿಯುವಿಕೆ ಇ. ಕಳ್ಳತನ ಮಾಡದಿರುವುದು ಈ. ಪಾವಿತ್ರ್ಯ.

**2. ನಾಲ್ಕು ಮಹಾನ್ ಸತ್ಯಗಳು:** ಅ. ದುಃಖ ಆ. ದುಃಖದ ಕಾರಣ ಇ. ದುಃಖದ ನಿವಾರಣೆ ಈ. ದುಃಖ ನಿವಾರಣೆಯ ಮಾರ್ಗ.

**3. ಅಷ್ಟಾಂಗ ಮಾರ್ಗ:** ಅ. ಒಳ್ಳೆಯ ನಂಬಿಕೆ ಆ. ಒಳ್ಳೆಯ ಆಲೋಚನೆ ಇ. ಒಳ್ಳೆಯ ಮಾತು ಈ. ಉತ್ತಮ ನಡತೆ ಉ. ಉತ್ತಮ ಜೀವನ ಊ. ಒಳ್ಳೆಯ ಪ್ರಯತ್ನ ಋ. ಉತ್ತಮ ವಿಚಾರಗಳ ನೆನಪು ಎ. ಯೋಗ್ಯ ರೀತಿಯ ಧ್ಯಾನ.

ಬುದ್ಧ ಎಂದಾಕ್ಷಣ ಜಗತ್ತಿಗೆ ನೆನಪಾಗಬೇಕಿರುವುದು ಕಾರುಣ್ಯ. ಅವನ ಅರೆ ತೆರೆದ ನಿಷ್ಕಲ್ಮಶ ಕಣ್ಣುಗಳು. ಆ ಮೂಲಕ ಯಾವುದನ್ನೂ ಆತ್ಯಂತಿಕವಾಗಿ ನಂಬಲಾರೆನೆಂಬ ಅವನ ನಿಲುವು. ಅವನ ಮಂದಸ್ಮಿತದ ಮುಖ ಜಗತ್ತಿಗೆ ಅನೇಕ ಕಾಣ್ಕೆಗಳನ್ನು ಧಾರೆಯೆರೆಯುತ್ತಿದೆ. ಇನ್ನು ಅವೈದಿಕ ಚಿಂತನೆಯಲ್ಲಿ ಬುದ್ಧನ ಸ್ಥಾನ ಅದ್ವಿತೀಯ. ಅಂತರಂಗದ ತಿಳಿವಳಿಕೆಯ ಮೂಲಕ ಬಾಹ್ಯ ಜಗತ್ತಿನ ಮೇಲೆ ತನಗಿರುವ ಆಸಕ್ತಿ, ದ್ವೇಷ, ಆಸೆ, ಅಸೂಯೆ ಇತ್ಯಾದಿಗಳನ್ನೆಲ್ಲ ಗೆಲ್ಲುವ ಕಡೆಗೆ ಅವನ ಚಿಂತನೆಗಳಿವೆ. ಮುಖ್ಯವಾಗಿ ಸನಾತನ ಧರ್ಮದಲ್ಲಿದ್ದ ದೇವತಾರಾಧಾನೆ, ಪೂಜೆ, ಮೂಢನಂಬಿಕೆ ಮೊದಲಾದುವುಗಳಿಂದ ಹೊರತಾದ ಹೊಸ ನೋಟಕ್ರಮವೊಂದರ ಹುಡುಕಾಟವೂ ಅವನ ಧ್ಯೇಯವಾಗಿದೆ. ಮೂಲತಃ ಬೋಧನೆ ಹಾಗೂ ಆಚರಣೆಗಳ ನಡುವೆ ಅಂತರವಿರುವುದನ್ನು ಮನಗಂಡ ಪರಿಣಾಮ ತಾನು ಬೋಧಿಸುತ್ತೇನೆಂಬ ಅಹಂಭಾವವಿಲ್ಲದೆ, ಸ್ನೇಹಿತರೊಡನೆ ಆಡಿದ ಮೆಲುಮಾತಿನಂತೆ ಅವನ ಧ್ವನಿ ಕೇಳಿಸುತ್ತದೆ.

ಭಾರತದಲ್ಲಿ ಇಂದಿಗೂ ಅಸ್ಥಿತ್ವದಲ್ಲಿರುವ ಶ್ರಮಣ ಧಾರೆಗಳು, ಭಾರತದಿಂದ ಆಚೆಗೆ ಸಾಗಿದ ಝೆನ್ ಪಂಥಗಳು, ಚೀನಾದಿಂದ ಮುಂದಕ್ಕೆ ಹಬ್ಬಿರುವ ಬೌದ್ಧ ಧರ್ಮ ಇಳಿದ ಬೇರಿನ ಆಳ ಮತ್ತು ಹಿಗ್ಗಿದ ವಿಸ್ತಾರ ಕುತೂಹಲಕಾರಿಯಾದುದು. ತಾನು ಹುಟ್ಟಿದ ದೇಶದಿಂದ ಜಗತ್‌ವಿಸ್ತಾರಕ್ಕೆ ಹಬ್ಬಿದ ಭಾರತೀಯ ವಿರಾಟ್ ತತ್ವವೆಂದರೆ ಅದು ಬೌದ್ಧ ತತ್ವ. ಅದರ ಕುರಿತು ಭಾರತದಲ್ಲಿ ಅಸಡ್ಡೆ ಬೆಳೆದುದಕ್ಕೆ ಇರುವ ಕಾರಣಗಳು ಮತ್ತೊಂದು ವಿಪ್ಲವಕ್ಕೆ ಕಾರಣವಾಗುವ ಸಾಧ್ಯತೆಗಳಿವೆ.

ನಮ್ಮ ಇಂದಿನ ಭಾವೋನ್ಮತ್ತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶದಲ್ಲಿ ಬುದ್ಧ ಅಥವಾ ಬೆಳಕು ಕಂಡವ ಒಂದು ಐಕಾನ್ ಆಗಿಯೂ, ಹಾಗೆಯೇ ಸತ್ಯ, ವಿವೇಕ ಹಾಗೂ ನೆಮ್ಮದಿಯ ಸಂಕೇತವಾಗಿಯೂ ಉಳಿದಿದ್ದಾನೆ. ಸಾಮಾಜಿಕ ಜಾಲತಾಣಗಳ ವೈರಲ್ ಸಂದೇಶಗಳಿಂದ ಹಿಡಿದು ಟೆಡ್ಟಾಕ್(ಖಿಜಜ ಖಿಚಿಟಞ) ಭಾಷಣಗಳಲ್ಲಿ ಉಲ್ಲೇಖಿಸಲಾಗುವ ಬುದ್ಧನ ವಿಸ್ತೃತವಾದ ಹೇಳಿಕೆಗಳು, ಇದರಲ್ಲಿ ಕೆಲವು ಬುದ್ಧನದೆಂದು ಹೇಳಲಾದ ಉಲ್ಲೇಖಗಳಾಗಿದ್ದರೂ, ಜೀವನದ ಪ್ರಕ್ಷುಬ್ಧತೆ ನಡುವೆ ಸಾಗುವಾಗ ನಮ್ಮ ಸಾಮುದಾಯಿಕ ಜಾಗೃತಿಯನ್ನು ಆವರಿಸುತ್ತದೆ.

ಇಂದಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಗೊಂದಲಗಳನ್ನು ತಣಿಸಲು ಹಾಗೂ ಒಂದು ಆದರ್ಶ ದೇಶವನ್ನು ಕಟ್ಟಲು ಯಾವ ರೀತಿಯ ಬುದ್ಧಿಸಂ ಅವಶ್ಯಕವೆಂಬ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮುಂದಿಟ್ಟ ನಿಯೋ ಬುದ್ಧಿಸಂ (ಅಂಬೇಡ್ಕರ್ ಅವರು ಹುಟ್ಟು ಹಾಕಿದ ಪದ) ಅಥವಾ 'ನವಯಾನ' ಈ ಪ್ರಶ್ನೆಯನ್ನು ಬಗೆಹರಿಸುತ್ತದೆ.

ಸಿದ್ಧಾರ್ಥ ಗೌತಮನು 2,500 ವರ್ಷಗಳ ಹಿಂದೆ ಜೀವನದ ಸಂಕಷ್ಟಗಳ ಮೂಲವನ್ನು ಹುಡುಕಿಕೊಂಡು ಹೊರಟ ಹಾಗೆ, ಅಂಬೇಡ್ಕರ್ ಅವರು 20ನೇ ಶತಮಾನದ ಅನ್ಯಾಯಗಳ ಪರಿಹಾರಕ್ಕೆ ರೂಪುರೇಷೆ ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ. ರಾಜಕುಮಾರ ಜೀವನದ ಬೆಳಕನ್ನು ಅರಸುತ್ತಾ ನೇಪಾಳದ ಕಪಿಲವಸ್ತುವಿನಿಂದ ಬಿಹಾರದ ಬೋಧಗಯಾಕ್ಕೆ ಹೊರಟಂತೆ, ಭೀಮರಾವ್ ಅವರು ಜ್ಞಾನವನ್ನು ಅರಸುತ್ತಾ ಭಾರತದಿಂದ ಲಂಡನ್, ನ್ಯೂಯಾರ್ಕ್ ಸೇರಿದಂತೆ ವಿಶ್ವಪಯಣ ನಡೆಸುತ್ತಾರೆ. ಬುದ್ಧ ಹಾಗೂ ಬಾಬಾ ಸಾಹೇಬ್ ಅವರು ಯಾವುದೇ ಜಾತಿ, ವರ್ಗ ಹಾಗೂ ಲಿಂಗಬೇಧವಿಲ್ಲದ, ಸರ್ವರಿಗೂ ಸಮಾನವಾದ ವ್ಯವಸ್ಥೆಗೆ ಪೂರಕವಾಗಿ ಹಲವು ಧರ್ಮಶಾಸ್ತ್ರಗಳ ಅಧಿಕಾರಕ್ಕೆ ಸವಾಲೆಸೆಯುತ್ತಾರೆ.

ಬುದ್ಧ ಮತ್ತು ಅಂಬೇಡ್ಕರ್‌ರವರ ತತ್ವಜ್ಞಾನದ ತಿರುಳು, ಸಮಾನತೆ, ಸಾಮಾಜಿಕ ನ್ಯಾಯ ಮತ್ತು ವೈಜ್ಞಾನಿಕ ಮನೋಭಾವ ಮೇಲೆ ನಿಂತಿದೆ ಹೊರತು, ಯಾವುದೇ ರೀತಿಯ ದೈವಿಕ ಹಸ್ತಕ್ಷೇಪ ಅಥವಾ ಪೂರ್ವ/ಭವಿಷ್ಯದ ವೃತ್ತಾಂತಗಳ ಮೇಲೆ ಅಲ್ಲ. ವೈಯಕ್ತಿಕವಾಗಿ ಧಾರ್ಮಿಕ ವ್ಯಕ್ತಿಯಾಗಿರದ ಅಂಬೇಡ್ಕರ್ ಅವರು, ಜೀವನದ ಉದ್ದಕ್ಕೂ ಧಾರ್ಮಿಕ ಪ್ರಜ್ಞೆಯುಳ್ಳ ವ್ಯಕ್ತಿಯಾಗಿ ಉಳಿಯುತ್ತಾರೆ. ಸಾವಿರಾರು ವರ್ಷಗಳಿಂದ ಬ್ರಾಹ್ಮಣರ ಶ್ರೇಣೀಕೃತ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗುತ್ತಾ ಬಂದ ದಲಿತರಿಗೆ ನಕಾರಾತ್ಮಕ ಮನೋಭಾವದ ಬದಲು ಒಂದು ಪರ್ಯಾಯ ಆಧ್ಯಾತ್ಮಿಕ ನೆಲೆಗಟ್ಟು ಅಗತ್ಯವಿದೆ ಎಂದು ಅವರು ಅರಿತುಕೊಂಡಿದ್ದರು.

ಬಾಬಾ ಸಾಹೇಬ್ ಅವರ ಮಾದರಿ ಧಾರ್ಮಿಕ ದೃಷ್ಟಿಕೋನದ ಅನ್ವೇಷಣೆಯು, ಅವರ ಅರ್ಧ ಶತಮಾನ ಗಳ ಸಂಶೋಧನೆ ಹಾಗೂ ವಿಮರ್ಶೆಗಳ ಫಲವಾಗಿದೆ. ಅಂಬೇಡ್ಕರ್ ತನ್ನ 16ನೇ ವಯಸ್ಸಿನಲ್ಲಿ ಬೌದ್ಧಧರ್ಮದ ಕುರಿತಾದ ಮೊದಲ ಪುಸ್ತಕವನ್ನು ಪಡೆಯುತ್ತಾರೆ ಹಾಗೂ 65ನೇ ವಯಸ್ಸಿನಲ್ಲಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುತ್ತಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಿದ್ದಲ್ಲಿ, ಯಾವ ರೀತಿ ಭಾರತೀಯ ಸ್ವಾತಂತ್ರ ಸಂಗ್ರಾಮದ ಹಾದಿಯನ್ನು ಬಾಬಾ ಸಾಹೇಬರ ಜೀವನ ಚರಿತ್ರೆಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವೋ, ಅದೇ ರೀತಿ ಅಂಬೇಡ್ಕರ್‌ರವರ ಸಾಮಾಜಿಕ ರಾಜಕೀಯ ಪಥವನ್ನು ಹಾಗೂ ಅವರು ಕಂಡುಕೊಂಡ ಧಾರ್ಮಿಕ ಹಾದಿಯನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಅವೆಲ್ಲಾ ಪರಸ್ಪರ ಬೆಸೆದುಕೊಂಡಿವೆ.

ದಲಿತರು ಹಿಂದೂ ಧರ್ಮದಿಂದ ಹೊರಬಂದು, ಅವರಿಗೆ ಧಾರ್ಮಿಕ ಸಂಜೀವಿನಿಯಾಗಿ 'ನವಯಾನ'ವನ್ನು ಅಂತಿಮಗೊಳಿಸುವ ಮೊದಲು ಅಂಬೇಡ್ಕರ್ ಅವರು, ಭಾರತದ ಪ್ರಮುಖ ಧರ್ಮಗಳಾದ ಇಸ್ಲಾಮ್, ಕ್ರಿಶ್ಚಿಯನ್, ಜೈನ ಹಾಗೂ ಸಿಖ್ ಧರ್ಮಗಳ ಚಲನಶೀಲತೆ ಹಾಗೂ ಸಂಕೇತಗಳನ್ನು ಅಭ್ಯಸಿಸುತ್ತಾರೆ.

ಆ ಕಾಲದ ಹಲವು ಮುಸ್ಲಿಮ್ ನಾಯಕರು ಇಸ್ಲಾಮಿಗೆ ಮತಾಂತರ ಹೊಂದುವಂತೆ ಅಂಬೇಡ್ಕರ್ ಅವರನ್ನು ಪುಸಲಾಯಿಸುತ್ತಾರೆ. 20ನೇ ಶತಮಾನದ ಪೂರ್ವಾರ್ಧದಲ್ಲಿ ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿ ಎಂದು ಹಲವು ಮಂದಿ ಪರಿಗಣಿಸಿದ್ದ ಹೈದರಾಬಾದಿನ ನಿಜಾಮ, ಮತಾಂತರಕ್ಕಾಗಿ ಅಂಬೇಡ್ಕರ್ ಅವರಿಗೆ 5 ಕೋಟಿ ರೂ. ನೀಡಲು ಮುಂದೆ ಬಂದಿದ್ದ. ಆದರೆ ಅಂಬೇಡ್ಕರ್ ಅವರಿಗೆ ವೈಯಕ್ತಿಕ ಆರ್ಥಿಕ ಲಾಭಕ್ಕಿಂತ, ನೀತಿತತ್ವ ಮತ್ತು ಸಿದ್ಧಾಂತ ಮುಖ್ಯವಾಗಿದ್ದ ಕಾರಣ ನಿಜಾಮನ ಪ್ರಸ್ತಾವನೆಯನ್ನು ತಿರಸ್ಕರಿಸುತ್ತಾರೆ. ಅಂಬೇಡ್ಕರ್ ಇಸ್ಲಾಮ್ನಲ್ಲಿ ಬಹಳಷ್ಟು ಸಾತ್ವಿಕ ಚಿಂತನೆಗಳನ್ನು ಗುರುತಿಸಿದರೂ, ಅದರಲ್ಲಿದ್ದ ಪರ್ದಾ ಮತ್ತು ಬಹು ಪತ್ನಿತ್ವದ ಆಚರಣೆಗಳು ಸ್ತ್ರೀಯರಿಗೆ ತಕ್ಕುದಾದ ಘನತೆಯನ್ನು ಒದಗಿಸುತ್ತಿಲ್ಲ ಎಂದು ಅವರು ಭಾವಿಸುತ್ತಾರೆ. ಕ್ರಿಶ್ಚಿಯನ್ ಧರ್ಮಕ್ಕೆ ಸಂಬಂಧಿಸಿದಂತೆ, ಈಗಿನ ಕಾಲದ ಕ್ರಿಶ್ಚಿಯನ್ನರು ಏಸುಕ್ರಿಸ್ತನ ತತ್ವಗಳಿಂದ ದೂರವಿದ್ದಾರೆ. ಕ್ರೈಸ್ತ ಧರ್ಮಕ್ಕೆ ದಲಿತರ ಸಾಮೂಹಿಕ ಮತಾಂತರದಿಂದ ಭಾರತ ಉಪಖಂಡದಲ್ಲಿ ಬ್ರಿಟೀಷರ ಹಿಡಿತ ಇನ್ನಷ್ಟು ಬಲಗೊಳ್ಳಬಹುದು ಎಂದು ಅಂಬೇಡ್ಕರ್ ಅವರು ಭಯಪಡುತ್ತಾರೆ. ದೇಶ ಏಕತೆಗಿಂತ ಹೆಚ್ಚಾಗಿ ದಲಿತರ ಮುಕ್ತಿಯನ್ನು ಬಾಬಾಸಾಹೇಬ್ ಪರಿಗಣಿಸಿರಲಿಲ್ಲ ಎಂಬುವುದು ಇದರಿಂದ ಸ್ಪಷ್ಟ. ಜೈನ ಧರ್ಮ ತನ್ನ ಅನುಯಾಯಿಗಳ ಬೇಡಿಕೆಗಳಿಗೆ ತೀವ್ರವಾದದಂತೆ ಕಂಡು ಬಂದರೆ, ಸಿಖ್ ಧರ್ಮ ಬೇರೆಯೆ ವಿಶೇಷತೆಯನ್ನು ಹೊಂದಿತ್ತು. ಸಿಖ್ ಧರ್ಮದ ಏಕದೇವೋಪಾಸನೆ ಮತ್ತು ಸಮಾನತೆಯ ತತ್ವಗಳು ಅಂಬೇಡ್ಕರ್ ಅವರನ್ನು ಸೆಳೆದಿದ್ದವು. ಈ ಕಾರಣದಿಂದಲೇ ಅವರು ಸಿಖ್ ಧರ್ಮದ ಬಗ್ಗೆ ಇನ್ನಷ್ಟು ಅರಿತುಕೊಳ್ಳಲು ತನ್ನ ಮಗ ಹಾಗೂ ಸೋದರಳಿಯನನ್ನು ಅಮೃತಸರದ ಗುರುದ್ವಾರಕ್ಕೆ ಕಳುಹಿಸುತ್ತಾರೆ. ಅವರು ಸೈದ್ಧಾಂತಿಕವಾಗಿ ಸಿಖ್ ಧರ್ಮದಿಂದ ಪ್ರಭಾವಿತರಾದರೂ, ಒಂದು ವೇಳೆ ದಲಿತರು ಸಿಖ್ ಧರ್ಮಕ್ಕೆ ಮತಾಂತರವಾದರೆ, ಅವರ ರಾಜಕೀಯ ಸಂಚಲನ ಕೇವಲ ಪಂಜಾಬಿಗೆ ಮಾತ್ರ ಸೀಮಿತವಾಗಬಹುದು ಎಂಬ ರಾಜಕೀಯ ಕಾರಣಕ್ಕಾಗಿ ಅದನ್ನು ಕೈಬಿಡುತ್ತಾರೆ.

ಬೌದ್ಧ ಧರ್ಮದಲ್ಲಿ ಅಂತರ್ಗತವಾದ ಹೊಂದಿಕೊಳ್ಳುವ ಗುಣ, ದಯೆ, ಸಮಾನತೆ ಮತ್ತು ಅರಿವು ಅಂಬೇಡ್ಕರ್ ಅವರನ್ನು ಆಕರ್ಷಿಸಿತು. ಬೌದ್ಧರು ಸುಮಾರು ಸಾವಿರ ಅಥವಾ ಸಾವಿರದ ಐದುನೂರು ವರ್ಷಗಳ ಹಿಂದೆಯೇ ಅಮಾನವೀಯ ಅಸ್ಪೃಶ್ಯತೆಯ ಜಾತಿ ವ್ಯವಸ್ಥೆ ವಿರುದ್ಧ ಸಂಘರ್ಷಕ್ಕೆ ಇಳಿದ ಇತಿಹಾಸ, ದಲಿತರಿಗೆ ಬೌದ್ಧ ಧರ್ಮ ವನ್ನು ಸಹಜ ಧರ್ಮವಾಗಿ ಅಪ್ಪಿಕೊಳ್ಳಲು ದಾರಿ ಮಾಡಿತು. 1956ರಲ್ಲಿ ಅಂಬೇಡ್ಕರ್ ಅವರು ಬೌದ್ಧ ಧರ್ಮದ 22 ಹೊಸ ಪ್ರತಿಜ್ಞೆಗಳೊಂದಿಗೆ ಹಾಗೂ ತನ್ನ ದುಡಿಮೆಯ 1/20ನೇ ಅಂಶವನ್ನು ದಾನವಾಗಿ ನೀಡುವ ಒತ್ತಾಸೆಯೊಂದಿಗೆ ದಲಿತರನ್ನು ಸಾಮೂಹಿಕವಾಗಿ ಮತಾಂತರದ ಮೂಲಕ 'ನವಯಾನ'ಕ್ಕೆ ಮುನ್ನಡೆಸುತ್ತಾರೆ. ಬಾಬಾಸಾಹೇಬ್ ಅವರು ಯಾವುದೇ

ಧಾರ್ಮಿಕ ವ್ಯಕ್ತಿಗಳಿಗೆ ಕಾಯದೆ ಮತಾಂತರ ಪ್ರಕ್ರಿಯೆಯನ್ನು ತಾವೇ ಸ್ವತಃ ಆರಂಭಿಸುವ ಮೂಲಕ 'ನವಯಾನ'ದಲ್ಲಿ ಮಧ್ಯವರ್ತಿಗಳ ಅಗತ್ಯವಿಲ್ಲವೆಂಬುವುದನ್ನು ಸ್ಪಷ್ಟಪಡಿ ಸುತ್ತಾರೆ. ಇದಾದ ಎರಡು ತಿಂಗಳಲ್ಲೇ ಅಂಬೇಡ್ಕರ್ ಅವರು ನಿಧನರಾದರೂ, ಅಷ್ಟರಲ್ಲೇ ನವಯಾನಕ್ಕೆ ಬುದ್ಧ ಮತ್ತು ಧಮ್ಮವನ್ನು ಧರ್ಮಶಾಸ್ತ್ರದ ಬುನಾದಿಯನ್ನಾಗಿಸುತ್ತಾರೆ. ಪ್ರಸ್ತುತ ದೇಶದ ಗೊಂದಲಮಯ ಸಾಮಾಜಿಕ ರಾಜಕೀಯ ವಾತಾವರಣದಲ್ಲಿ ಬಾಬಾಸಾಹೇಬ್ ಅವರ ಸತ್ಯವಾಖ್ಯ ನಿರಂತರವಾಗಿ ಸತ್ಯವಾಗಿ ಅನುರಣಿಸುತ್ತಿದೆ. ಭಾರತದ ಇತಿಹಾಸವು ಕೇವಲ ಬೌದ್ಧ ಧರ್ಮ ಮತ್ತು ಬ್ರಾಹ್ಮಣತ್ವದ ಬದ್ಧವೈರದ ಸಂಘರ್ಷವಾಗಿದೆ. ಭಾರತದ ಬಗ್ಗೆ ಸಮಗ್ರವಾಗಿ ಅರ್ಥೈಸಿಕೊಳ್ಳಬೇಕಿದ್ದರೆ, ಬುದ್ಧ ಹಾಗೂ ಬುದ್ಧಿಸಂ ಕುರಿತು ಅಂಬೇಡ್ಕರ್ ಅವರ 'ನವಯಾನ'ವನ್ನು ಅರಿತುಕೊಳ್ಳಬೇಕಾಗಿದೆ. ಅದು ಸದ್ಯ ನಡೆಯುತ್ತಿರುವ ಸಂಘರ್ಷಗಳಿಗೆ ಬಹುತೇಕ ಪರಿಹಾರವನ್ನು ಒದಗಿಸಲಿದೆ.

ಭಾರತದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ತಮ್ಮ ಕೊನೆಯ ದಿನಗಳನ್ನು ಬುದ್ಧತ್ವದ ಶೋಧನೆಯಲ್ಲಿ ಕಳೆದರು. ಬುದ್ಧನ ಬೋಧನೆಗಳು ಶಾಶ್ವತವೇ ಹೌದಾದರು, ಅದರ ಶಾಶ್ವತತೆಯ ಬಗ್ಗೆ ಬುದ್ಧ ಎಲ್ಲೂ ಹೇಳಿಕೊಂಡಿರಲಿಲ್ಲ. ಬೌದ್ಧ ಸಿದ್ಧಾಂತವು ಸಮಯದ ಅವಶ್ಯಕತೆಗೆ ತಕ್ಕಂತೆ ಬದಲಾಗುವ ಅರ್ಹತೆ ಹೊಂದಿದ್ದು, ಅದು ಸಾರ್ವಕಾಲಿಕ ಸತ್ಯವಾಗಿದೆ. 1954 ರಲ್ಲಿ ನಡೆದ ಬೌದ್ಧ ಸಮ್ಮೇಳನದಲ್ಲಿ ಅಂಬೇಡ್ಕರ್ ರವರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರು.

ಹಿಂದೂ ಧರ್ಮದೊಳಗಿನ ಸಾಮಾಜಿಕ ಅಸಮಾನತೆಯ ಅವಮಾನದಿಂದ ಹೊರಬರಲು ಅಂಬೇಡ್ಕರ್ ಕೈಗೊಂಡ ದಿಟ್ಟ ಕ್ರಮಗಳಲ್ಲಿ 'ಬೌದ್ಧ ಧರ್ಮ ಸ್ವೀಕಾರ'ವೂ ಒಂದು. ಧರ್ಮವು ಸಮಾಜಕ್ಕೆ ಅಗತ್ಯ ಎಂದೇ ಪ್ರತಿಪಾದಿಸಿದ್ದ ಅಂಬೇಡ್ಕರ್ ತಮ್ಮ ಆದರ್ಶದ ಧರ್ಮವನ್ನು ಬುದ್ಧತತ್ವ ಹಾಗೂ ಬುದ್ಧ ಧರ್ಮದಲ್ಲಿ ಕಂಡುಕೊಂಡರು. ನಿರ್ದಿಷ್ಟ ಸಮುದಾಯಗಳನ್ನು ಹೊರಗಿಟ್ಟು ಹಿಂದೂ ಧರ್ಮಕ್ಕೆ ವಿಷಾದ ಪೂರ್ವಕ ಪ್ರತಿರೋಧವಾಗಿ ಬುದ್ಧ ಧರ್ಮವನ್ನು ಸ್ವೀಕರಿಸಿದರು.

ಬುದ್ಧ ಗುರು ಬದುಕಿದ ಪ್ರಜಾಸತ್ತಾತ್ಮಕ, ಸಮಾನತೆ ಮತ್ತು ಸಹೋದರತೆಗಳೇ ನಿಜವಾದ ಧರ್ಮ ಎಂದು ನಂಬಿ ನಡೆದರು. ದೇವರ ಬಗ್ಗೆ ಮೌನ ತಾಳಿದ, ವೇದ ಪ್ರಾಮಾಣ್ಯ ಮತ್ತು ಚಾತುವರ್ಣ್ಯವನ್ನು ವಿರೋಧಿಸಿದ ಬುದ್ಧ ಒಬ್ಬ 'ವಿಚಾರವಾದಿ' ಎಂದು ಕರೆದರು. ಇವುಗಳ ಹಿನ್ನೆಲೆಯಲ್ಲಿ ಅಂಬೇಡ್ಕರ್ ಬರೆದ ಅನೇಕ ಲೇಖನಗಳ ಸಂಗ್ರಹವನ್ನು ಕನ್ನಡದ ವಿದ್ವಾಂಸರು ಸಂಪಾದಿಸಿದ್ದಾರೆ. ಇದು ಸಹ ಬುದ್ಧ ಭಾರತ ಹೊಸ ಸಾಧ್ಯತೆಗಳಲ್ಲಿ ಒಂದಾಗಿದೆ.

ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆ ಇರುವುದು ಸಾಮಾಜಿಕ ಪ್ರಜಾಪ್ರಭುತ್ವ ಎಂದು ಅಂಬೇಡ್ಕರ್ ಹೇಳಿದ್ದರು. ಅವರ ಪರಿಕಲ್ಪನೆಯ ಸಾಮಾಜಿಕ ಸ್ವಾತಂತ್ರ್ಯದ ಸಾಕಾರವಾಗಿದೆಯೇ ಎಂಬ ಪ್ರಶ್ನೆ ಕೇಳಿಕೊಳ್ಳಬೇಕು'. 'ಸ್ವಾತಂತ್ರ್ಯ ಹೋರಾಟ' ಒಂದೇ ವಿಚಾರಧಾರೆಯಿಂದ ಬಂದಿದ್ದಲ್ಲ. ಒಂದೇ ರಾಷ್ಟ್ರೀಯಧಾರೆಯೂ ಇರಲಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು' 'ಸಮಸ್ಯೆಗಳನ್ನು ಮರೆಸಲು ಭಾವನಾತ್ಮಕ ವಿಚಾರ ಮುಂದೆ ತಂದಾಗ, ಜನರು ಭಾವೋದ್ವೇಗಕ್ಕೆ ಒಳಗಾಗುತ್ತಾರೆ. ಹೀಗಾಗಿ, ಮೂಲಭೂತವಾದ ದೊಡ್ಡ ಸಮಸ್ಯೆಯಾಗಿದೆ. ಮಾನವೀಯ ಆಶಯಗಳು ಹಾಗೂ ಅಂತಃಕರಣದ ಮೇಲೆ ಹಲ್ಲೆ ನಡೆಸುವ ಎಲ್ಲ ಧರ್ಮಗಳ ಮೂಲಭೂತವಾದವನ್ನೂ ವಿರೋಧಿಸಬೇಕು. ಹೀಗಾಗಿ, ಇದು ಆತ್ಮಾವಲೋಕನದ ಕಾಲವೂ ಹೌದು' ಎಂದರು.

'ಹುಟ್ಟಿನಿಂದ, ಧರ್ಮದಿಂದ ಅಥವಾ ವಿಚಾರದಿಂದ ನಾವೇನೇ ಇದ್ದರೂ ಒಟ್ಟು ದೇಶದ ಸ್ಥಿತಿ ಬಂದಾಗ ಸಮಾನತೆ–ಸಹಿಷ್ಣುತೆ–ಶಿಕ್ಷಣ ಮುಖ್ಯವೆಂದು ಬದ್ಧವಾಗಿರುವವರೇ ಪ್ರಬುದ್ಧ ಭಾರತದ ನಿಜವಾದ ನೇತಾರರು. ಈಗ ಕುರ್ಚಿ ಮೇಲೆ ಕುಳಿತಿರುವವರಲ್ಲ' ಎಂದು ವಿಶ್ಲೇಷಿಸಿದರು.

'ನಮಗೆ ಬೇಕಿರುವುದು ಮೂಲಭೂತವಾದವೋ, ಮಾನವತಾವಾದವೋ? ಮನುವಾದ ಬೇಕೋ, ಮನುಷ್ಯವಾದವೋ ಎಂಬ ಪ್ರಶ್ನೆ ಕೇಳಿಕೊಳ್ಳಬೇಕು. ಏಕೆಂದರೆ, ಮನುವಾದವನ್ನು ಪುನರ್ ಸ್ಥಾಪಿಸುವ ಪ್ರಯತ್ನಗಳು ನಿರಂತವಾಗಿ ನಡೆಯುವೆ'

**ಬರಗೂರು ವಿಶ್ಲೇಷಣೆ**

* ಸಾಮಾಜಿಕ, ಆರ್ಥಿಕ ಚಲನಶೀಲತೆ ಆಗಿರುವುದು ನಿಜ. ಆದರೆ, ಇದು ಯಾವ ದಿಕ್ಕಿನಲ್ಲಿದೆ ಎನ್ನುವುದು ಮುಖ್ಯವಾಗುತ್ತದೆ. ದೇಶದ 74ರಷ್ಟು ಸಂಪತ್ತನ್ನು ಶೇ 1ರಷ್ಟು ಜನ ಅನುಭವಿಸುತ್ತಿದ್ದಾರೆ. ಈ ಅಂತರ ಜಾಗತೀಕರಣದ ನಂತರ ಸೃಷ್ಟಿಯಾಗಿದೆ. ಇದೇ ಅಭಿವೃದ್ಧಿಯಾ? ಈ ಕಂದಕವನ್ನು ಮುಚ್ಚುವವರಾರು?

* ಸರ್ಕಾರದ ಅಂಕಿ–ಅಂಶಗಳ ಪ್ರಕಾರ, ನಿರುದ್ಯೋಗ ಪ್ರಮಾಣ ಜಾಸ್ತಿಯಾಗಿದೆ. ಹಸಿವಿನ ಸೂಚ್ಯಂಕ 94ರಿಂದ 100ಕ್ಕೆ ಏರಿದೆ. ಅಭಿವೃದ್ಧಿಯ ಫಲಿತವು ಕಟ್ಟಕಡೆಯವರಿಗೆ ತಲುಪುತ್ತಿಲ್ಲ. ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಲೇ ಇದೆ. ಈ ಕಂದಕಗಳು ಹೆಚ್ಚುತ್ತಿರುವುದು ಆತಂಕಕಾರಿ.

* ಮೇಲ್ನೋಟದ ಚಿತ್ರಕ್ಕೂ, ಜನರ ಆಂತರ್ಯದ ಸಂಕಟಗಳಿಗೂ ಇರುವ ಅಂತರದ ಬಗ್ಗೆ ಯೋಚಿಸಬೇಕು. ಸ್ವಾತಂತ್ರ್ಯ ಪೂರ್ವದ ರಾಷ್ಟ್ರೀಯಧಾರೆಗಳು ಸಾಕಾರಗೊಳ್ಳದೆ ಹೋದರೆ ಪ್ರಬುದ್ಧ ಭಾರತ ನಿರ್ಮಾಣ ಸಾಧ್ಯವಾಗದು.

* ಮೇಲ್ನೋಟಕ್ಕೆ ಥಳುಕಿನ ಭಾರತ ಕಾಣುತ್ತಿದೆ; ಬೆಳಕಿನ ಭಾರತವಲ್ಲ. ಬೆಳಕಿನ ಭಾರತವು ಪ್ರಜಾಪ್ರಭುತ್ವದ ಪಕ್ವತೆಯಿಂದ ಬರುತ್ತದೆ.

* ಕೇಂದ್ರ ಸರ್ಕಾರವು ಈ ವರ್ಷದ ಬಜೆಟ್ನಲ್ಲಿ ನರೇಗಾಕ್ಕೆ ಶೇ 25.5ರಷ್ಟು, ಗ್ರಾಮೀಣಾಭಿವೃದ್ಧಿಗೆ ಶೇ 10.09ರಷ್ಟು ಮತ್ತು ಆಹಾರ ಸಹಾಯಧನಕ್ಕೆ ಶೇ 28.05ರಷ್ಟು ಅನುದಾನ ಕಡಿಮೆ ಮಾಡಿದೆ. ಹೀಗಿರುವಾಗ, ಕೊರೊನಾ ಸಂದರ್ಭದಲ್ಲಿ ಕೆಲವರಿಗೆ ಶೇ 35ರಷ್ಟು ಸಂಪತ್ತು ಹೆಚ್ಚಾಯಿತಲ್ಲಾ ಆ ಪವಾಡವೇನು, ಇದು ನಿಜವಾದ ಪ್ರಬುದ್ಧ ಭಾರತವಾ?

**ಪರಾಮರ್ಶನ ಗ್ರಂಥಗಳು**


1. ಡಾ. ಎಚ್. ಎಸ್. ಅನುಪಮಾ – ಬುದ್ಧ ಬೆಳಕಿನಲ್ಲಿ ಅಂಬೇಡ್ಕರ್ ಭಾರತ
2. ಟಿ. ಎನ್. ವಾಸುದೇವಮೂರ್ತಿ(ಅನು) – ಓಶೋ, ಬುದ್ಧ ಮತ್ತು ಪರಂಪರೆ
3. ಮ.ನ. ಜವರಯ್ಯ – ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ
4. ರಾಜಣ್ಣ ಓ. – ಬುದ್ಧಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು